ಸರಳವಾದ ಚಲ್ಲಣ: ಇದರಲ್ಲಿ ಯಾವುದೇ ರೀತಿಯ ಹೊಲಿಗೆಗಳ ವಿನ್ಯಾಸ, ಜರಿಯ ಪಟ್ಟಿಗಳು ಅಷ್ಟಾಗಿ ಕಂಡುಬರುವುದಿಲ್ಲ. ಸರಳವಾದ ಚಲ್ಲಣ ಇದು.

ಸಮಾನಾಂತರ ಮಡಿಕೆ: ಈ ಚಲ್ಲಣದಲ್ಲಿ ಸಮಾನಾಂತರದ ಬಟ್ಟೆಯ ಮಡಿಕೆಗಳನ್ನು ಕಾಣಬಹುದು (ಇದು ತುಂಬ ಪ್ರಚಲಿತದಲ್ಲಿದೆ). ಕೆಳಭಾಗಕ್ಕೆ ಜರಿಯ ಪಟ್ಟಿಯಿದ್ದರೆ ಚೆನ್ನ.

ಸೂರ್ಯ ಮಡಿಕೆ (ಸನ್ ಫಿಲ್ಟ್): ಇದರಲ್ಲಿ ಮಡಿಕೆಗಳು ಸ್ವಲ್ಪ ಎದ್ದು ಕಾಣುತ್ತದೆ. ಕೃಶಕಾಯದವರಿಗೆ ಸೂಕ್ತ. ಏಕ ವ್ಯಕ್ತಿ ಪ್ರದರ್ಶನ ಮಾಡುವವರು ಇದನ್ನು ಬಳಸಬಹುದು. ಆಗ ವೇದಿಕೆಯಿಂದ ಅಬ್ಬರವಾಗಿ ಸಭಿಕರಿಗೆ ನೃತ್ಯ ಮಾಡುವವರನ್ನು ಕಾಣುತ್ತದೆ.

ಸಮಾನಾಂತರವಾಗಿ ಜರಿಯನ್ನು ಅಳವಡಿಸಿದ ದಿರಿಸು: ಇದು ಬಹು ಸುಂದರ ಚಲ್ಲಣ 2 ಇಂಚು ಅಂತರದಲ್ಲಿ ಹತ್ತಿರ ಹತ್ತಿರವಾಗಿ ಜರಿಯ ಅಂಚನ್ನು ಅಳವಡಿಸಿದ ಈ ಚಲ್ಲಣ ನೋಡುಗರ ಕಣ್ಮನ ಸೆಳೆಯುತ್ತದೆ.

ಚಲ್ಲಣದಲ್ಲೂ ಮುಕ್ಕಾಲು ಕಾಲು ಚಲ್ಲಣ ಚಾಲ್ತಿಯಲ್ಲಿದೆ. ಎಲ್ಲಾ ರೀತಿಯ ಲಾಸ್ಯ, ಸುಕುಮಾರ ನೃತ್ಯ ಪ್ರಕಾರ ಸುಲಭವಾಗುತ್ತದೆ. ವಸ್ತ್ರವಿನ್ಯಾಸದ ರೀತಿಗಳು

## ಕಚ್ಚೆ ಸೀರೆ ವಿನ್ಯಾಸ

ಇದರಲ್ಲಿ ಸಾಮಾನ್ಯ ಸೀರೆಯಲ್ಲಿ ಬಳಸುವ ರವಿಕೆಯಾಗಿದ್ದು, ಕೆಳಭಾಗ ಕಚ್ಚೆಯ ರೂಪದಲ್ಲಿ ಹೊಲಿದಿರಲಾಗುತ್ತದೆ. ಅಂದರೆ ಸಿದ್ಧ ಉಡುಪು ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ಸೊಂಟದಿಂದ ಕೆಳಗೆ ಸಣ್ಣ ನೆರಿಗೆಗಳುಳ್ಳ ಜರಿಯ ವಸ್ತ್ರ (ಫ್ಯಾನು) ಇರುತ್ತದೆ. ರವಿಕೆಯ ಎದುರು ಭಾಗಕ್ಕೆ ಸೆರಗು ಇರುತ್ತದೆ. ಜೊತೆಯಲ್ಲಿ ಪಲ್ಲವ (ಪೃಷ್ಠಕ್ಕೆ ಸುತ್ತುವ ಬಟ್ಟೆ) ಇರುತ್ತದೆ.

## ಲಂಗ ಸೀರೆ ವಿನ್ಯಾಸ

ಸೊಂಟದಿಂದ ಕೆಳಭಾಗ ಲಂಗದ ರೂಪದಲ್ಲಿದ್ದು (ತುಂಬ ನೆರಿಗೆಗಳು ಇರಬೇಕು) ಮೇಲ್ಭಾಗದ ಸೆರಗನ್ನು ಹೊಂದಿದೆ. ರವಿಕೆ ಉದ್ದವಾಗಿರುವುದನ್ನು ಧರಿಸಬಹುದು. ಪಲ್ಲವ ಮತ್ತು ಸಣ್ಣ ನೆರಿಗೆಯ ಬಟ್ಟೆ (ಫ್ಯಾನು) ಚಂದ. ಇದು ಮಹಿಳೆಯರಿಗೆ ಹಿತ. ಬದಿಯ ಸೆರಗಿನ ದಿರಿಸು. ಇದು ಹೊಸ ಪ್ರಯೋಗ ಎನ್ನಬಹುದು. ಸೆರಗು 2 ಬದಿಯಿಂದಲೂ ಇದ್ದು, ಚಲ್ಲಣದಲ್ಲಿ ಸಮಾನಾಂತರ ನೆರಿಗೆಗಳಿದ್ದು, ಪಲ್ಲವ ನೆರಿಗೆ ಬಟ್ಟೆ ಇರಬೇಕು. ಇದರ ರವಿಕೆ ಉದ್ದ ಲಂಗದ ರವಿಕೆಯಂತೆ ಉದ್ದವಾಗಿದ್ದಾಗ ನಾಟ್ಯ ಮಾಡಲು ಬಲು ಸುಲಭ ಬಟ್ಟೆ ಜಾರುವುದಿಲ್ಲ. ಹದಿಹರೆಯದವರಿಗೆ ಸೂಕ್ತ.

## ನೆರಿಗೆಗಳ ಸುಂದರ ದಿರಿಸು

ಉಳಿದ ಎಲ್ಲಾ ವಿನ್ಯಾಸ ಒಂದೇ ಆಗಿದ್ದು ಚಲ್ಲಣದ ಎದುರು ಭಾಗ 3 ಮೆಟ್ಟಿಲುಗಳಾಗಿ ನೆರಿಗೆ ಇರುತ್ತದೆ. ಅಡವುಗಳು, ಆಯತ ಮಂಡಲಗಳು ಮತ್ತು ಅತಿಭಂಗಿಗಳಂತ ಭಂಗಿಗಳಿಗೆ ಹೆಚ್ಚು ಸೂಕ್ತವಾಗಿದೆ. ನೆರಿಗೆಗಳು ಅಗಲವಾಗಿ ಹರಡಿ ನೋಡುಗರ ಕಣ್ಣಿಗೆ ಬಹಳ ಅಂದವಾಗಿ ಕಾಣುತ್ತದೆ.

ಚಲ್ಲಣದೊಂದಿಗೆ ಇಳಿಬಿಟ್ಟ ನೆರಿಗೆ: ಚಲ್ಲಣದೊಂದಿಗೆ ಹೊರಬದಿಯಿಂದ ಒಂದು ಸೆರಗು ಹಾರಿದಂತೆ ಇದ್ದು ವಿನ್ಯಾಸ ಬಹಳ ಸುಂದರವಾಗಿ ಕಾಣುತ್ತದೆ. ಜೊತೆಗೆ ರವಿಕೆಯ ಕೈಗೆ ವಂಕಿ ತರ ಕಾಣುವಂತೆ ಪಟ್ಟಿಯನ್ನು ಕೊಟ್ಟಾಗ ಬಹಳ ಸುಂದರವಾಗಿ ನೃತ್ಯಗಾರ್ತಿಯ ಬಟ್ಟೆ ವೇದಿಕೆಯಿಂದ ಕಾಣುತ್ತದೆ. ಆಭರಣವೂ ಕಡಿಮೆ ಸಾಕು.

ಸೀರೆ ವಿನ್ಯಾಸದ ದಿರಿಸು: ಇದು ನಡು ವಯಸ್ಸಿನ ಕಲಾವಿದರಿಗೆ ಚಂದ. ಮುಕ್ಕಾಲು ಕಾಲು ಸೀರೆ ಉಟ್ಟಂತೆ ಇದ್ದು ಸಿದ್ಧ ಉಡುಪು ಮಾರುಕಟ್ಟೆಯಲ್ಲಿ ದೊರೆಯುತ್ತದೆ. ಸೀರೆಯ ಒಳಭಾಗದಲ್ಲಿ ಸೂಕ್ತ ಬಣ್ಣದ ಮುಕ್ಕಾಲು ಪೈಜಾಮನ್ನು ಧರಿಸಬೇಕು.

ವೇಷ್ಟಿ ಕಚ್ಚೆ ವಿನ್ಯಾಸ: ಇದು ವಿಭಿನ್ನವಾಗಿ ನಾವೇ ತಯಾರುಮಾಡುವಂತಹದ್ದು. ಸೊಂಟದಿಂದ ಕೆಳಬಾಗಕ್ಕೆ ಸಂಪೂರ್ಣ ಬಟ್ಟೆಯನ್ನು ಕಚ್ಚೆ ಹಾಕಿ ಅದರ ಮೇಲೆ ಪಲ್ಲವ ಮತ್ತು ನೆರಿಗೆಯ ಬಟ್ಟೆಯನ್ನು ಕಟ್ಟಿ ಮೇಲೆ ಯಥಾ ಪ್ರಕಾರ ರವಿಕೆ ಮತ್ತು ಸೆರಗು ಧರಿಸಬೇಕು. ಬಿಳಿಯ ಕಚ್ಚೆ ವೇದಿಕೆಯಿಂದ ಬಹು ಸೊಗಸಾಗಿ ಕಾಣುತ್ತದೆ. ಇದು ವಿಭಿನ್ನವಾಗಿರುವ ಮಹಿಳಾ ಮಣಿಗಳ ವಸ್ತ್ರ ವಿನ್ಯಾಸವಾಗಿದೆ. ತಾಂಡವ ಶೈಲಿಗೆ ಸೂಕ್ತ. ಉದ್ಧತವಾದ ನೃತ್ಯ ಪ್ರಕಾರಕ್ಕೆ ಇನ್ನೂ ಚೆನ್ನ.

## ವಿಭಿನ್ನವಾದ ಪುರುಷರ ವಸ್ತ್ರವಿನ್ಯಾಸ

ಕಂಸಾಳೆ ಕಚ್ಚೆ ರೀತಿ: ಇದು ಸಿದ್ಧ ಉಡುಪು. ಸೊಗಸಾದ ಕಚ್ಚೆಯನ್ನು ಹೊಲಿದು ತಯಾರಿಸಿ ಅದನ್ನು ಸುಲಭದಲ್ಲಿ ಧರಿಸುವಂತೆ ಇರುತ್ತದೆ. ಬೇಕಾದಲ್ಲಿ ಜರಿಯ ಪಟ್ಟಿಯನ್ನು ಜೋಡಿಸಿ ಇನ್ನೂ ಅದ್ದೂರಿ ನೋಟ ಬರುವಂತೆ ಮಾಡಬಹುದು. ಶರೀರದ ಮೇಲ್ಭಾಗಕ್ಕೆ ಎರಡೂ ಬದಿಯಿಂದ ಸಪೂರವಾಗಿ ಶಾಲನ್ನು ಇಳಿಬಿಡಬೇಕು. ನೋಡುಗರ ನೋಟಕ್ಕೆ ಇದು ಹಿತ.

ಕಟ್ಟುವ ಕಚ್ಚೆ: ಸೀರೆಯಷ್ಟು ಉದ್ದವಿರುವುದಿಲ್ಲ ಬದಲಾಗಿ ಡಬಲ್ ವೇಷ್ಟಿಯಷ್ಟು ಉದ್ದವಿರಬೇಕು. ಅಂಚು ಹೊಂದಿರಬೇಕು. ಮೈ ಬಣ್ಣ ಮತ್ತು ತುದಿಯ ಅಂಚು ವಿರುದ್ಧ ಬಣ್ಣದಲ್ಲಿರಬೇಕು. ಅಂದರೆ ಹಸಿರು ಸೀರೆಗೆ ಕೆಂಪು ಅಂಚು ಇದ್ದಾಗ ಬಲು ಅಂದ. ಕಚ್ಚೆ ಕಟ್ಟಿ ಪಲ್ಲವದ ಜೊತೆಗೆ ಭುಜದಿಂದಾಗಿ ಕೆಳಗೆ ಸಪುರದ ಪಟ್ಟಿ ಶಾಲನ್ನು ಹೊಲಿಸಬೇಕು. ಪಲ್ಲವ (ಬ್ಯಾಕ್ ಸೀಟ್) ಬಹಳ ಪ್ರಾಮುಖ್ಯವಾದವು (ಸೀರೆಯ ಸೆರಗಿನಲ್ಲಿ ಪಲ್ಲವವನ್ನು ಜಾಣ್ಮೆಯಿಂದ ಕಟ್ಟುವುದು ಒಂದು ಕಲೆ).

ಓರೆ (ಕ್ರಾಸ್) ನೆರಿಗೆಯ ಕಚ್ಚೆ: ಚಲ್ಲಣ ಹೊಂದಿದ್ದು ಎದುರಿನ ನೆರಿಗೆ ಅರ್ಧ ಡಯಾಗ್ನಲ್ ಇರುತ್ತದೆ. ಇದು ಇಂದಿನ ಯುಗಕ್ಕೆ ಫ್ಯಾಷನಬಲ್ ಆಗಿ ಕಾಣುತ್ತದೆ.

ಸರಳ ಸಿದ್ಧ ಚಲ್ಲಣ ವಿನ್ಯಾಸ: ಸಾಮಾನ್ಯ ಮಕ್ಕಳಿಗೆ ಇದು ಹಿತ. ಚಲ್ಲಣದ ಎದುರು ಸೊಂಟಕ್ಕೆ ಎದುರುಭಾಗದಲ್ಲಿ ದೊಡ್ಡದಾದ ನೆರಿಯನ್ನು ಹೊಂದಿದ ವಿನ್ಯಾಸ. ಸಾಧಾರಣ ಪ್ಯಾಂಟ್ ಬಣ್ಣ ಮತ್ತು ಭುಜದ ಭಾಗದ ಬಟ್ಟೆ ಒಂದೇ ಇದ್ದು ನೆರಿ ಬೇರೆ ಬಣ್ಣದ್ದನ್ನು ಧರಿಸಿದಾಗ ಸೊಗಸು.

ಕೃಷ್ಣ ಕಚ್ಚೆ ವಿನ್ಯಾಸ: ಕೆಲವೊಂದು ಬಾರಿ ಸೀರೆಯನ್ನೇ ಬಳಸಿ ದಿರಿಸನ್ನು ಕೂಡ ಮಾಡಬಹುದು. ಅದು ತೊಡುವವನ ಕೈ ಚಳಕದಲ್ಲಿದೆ. ಒಂದು ಭಾಗದ ನೆರಿಗೆಯನ್ನು ಹಿಂಭಾಗಕ್ಕೆ ಕಟ್ಟಿ ಉಳಿದ ಭಾಗ ಎದುರಿಗೆ ನೆರಿಗೆಯಿರುವುದು.

ಯಾವುದೇ ವಿನ್ಯಾಸ ಆಗಿರಬಹುದು ಬಣ್ಣಗಳ ಜೋಡಿಕೆ ಬಹಳ ಪ್ರಾಮುಖ್ಯವಾಗಿದೆ. ನೀಲಿಕೆಂಪು, ಹಸಿರು ಹಳದಿ, ಬಿಳಿ ಪಿಂಕ್, ಮೈ ಬಣ್ಣ ಮತ್ತು ಅಂಚು ಬೇರೆ ಬೇರೆ ಇರುವಂತೆ ಆಯ್ಕೆ ಮಾಡಬೇಕು. ಅಲ್ಲದೇ ಪ್ಯಾಂಟ್‌ನಲ್ಲಿ ಗ್ರಾಂಡ್ ಲುಕ್ ಬರಬೇಕೆಂದರೆ ಅಂಚಿನ ಪಟ್ಟಿಯನ್ನು ಸಮಾನವಾದ ಅಂತರದಲ್ಲಿ ಕೆಳಗಿನ ಮೇಲೆವರೆಗೆ ಹೊಲಿದಾಗ ಲುಕ್ ಚೆನ್ನಾಗಿರುತ್ತದೆ. ಸಾಧಾರಣವಾಗಿ ಬ್ರೊಕೇಡ್ ಮೆಟೀರಿಯಲನ್ನು ಸ್ವಚ್ಛವಾಗಿ ತೊಳೆಯಬಹುದು. ಮಕ್ಕಳಿಗೆ ಅದನ್ನು ಬಳಸಬಹುದು. ತುಂಬಾ ಬೆವರುವುದರಿಂದ ಈ ಮೆಟೀರಿಯಲ್ ಒಳ್ಳೆಯದು. ರೇಷ್ಮೆಯಲ್ಲದ ಬಾರ್ಡರ್ ಇಲ್ಲದ ಬಟ್ಟೆ ಈಗ ಬಹಳ ಚಾಲ್ತಿಯಲ್ಲಿದೆ. ಒಟ್ಟಿನಲ್ಲಿ ಬಹಳ ಶುಭ್ರವಾಗಿ ಇಸ್ತ್ರಿ ಹೊಂದಿದ, ಮೈಗೊಪ್ಪುವ ಸುಂದರ ವಸ್ತ್ರದಲ್ಲಿ ನಾಟ್ಯ ನೋಡಲು ಅತೀ ಸುಂದರ. ವೇದಿಕೆಯ ಪರದೆಯ ಬಣ್ಣ ಮತ್ತು ಕಲಾವಿದರ ಮೈಬಣ್ಣವನ್ನು ಗಮನಿಸಿಕೊಂಡು ದಿರಿಸಿದ ಬಣ್ಣವನ್ನು ಆಯ್ಕೆಮಾಡಿಕೊಳ್ಳಬೇಕು. ಇದು ಮುಖ್ಯವಾದ ವಿಷಯ. ಇದಲ್ಲದೆ ಸೃಜನಶೀಲತೆಯಿಂದ ಇನ್ನೂ ಹಲವು ವಿನ್ಯಾಸಗಳು ಬಳಕೆಯಲ್ಲಿದೆ.



(ಚಿತ್ರಗಳು: ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿ ಪುತ್ತೂರು)